# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್‌ಸಿ. 245/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಗೌತಮ್ | | **ಪ್ರಮಾಣ ಮಾಡಿಸಿದ ದಿನಾಂಕಃ** |
| **ತಂದೆ/ಗಂಡನ ಹೆಸರು** | ಃ ವೆಂಕಟೇಶ | | **21.12.2024** |
| **ವಯಸ್ಸು** | ಃ **26 ವರ್ಷ** | | |
| **ವೃತ್ತಿ** | ಃ ಡ್ರೈವರ್ | | **ಪ್ರಾ.ಸಾ. ಃ 4** |
| **ವಾಸಸ್ಥಳ** | ಃ ಹೊಸಹಳ್ಳಿ ಗ್ರಾಮ | | **ಚಾ.ಸಾ. ಃ 2** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ದಿಃ *15.03.2023* ರಂದು ಮೇಟಗಳ್ಳಿ ಪೊಲೀಸ್ ಠಾಣೆಯಲ್ಲಿ ಕೋರ್ಟು ಮುಂದಿರುವ ಆರೋಪಿತ ಒಂದು ಶರ್ಟು ಒಂದು ಜೀನ್ಸ ಪ್ಯಾಂಟ್ ಮತ್ತು ಒಂದು ಮಾಸ್ಕನ್ನು ಹಾಜರುಪಡಿಸಿದ ಅವುಗಳನ್ನು ತಾನು ಚಾಸಾ *1* ಚಂದನ್ ಇವರಿಗೆ ಹಲ್ಲೆ ಮಾಡುವ ಕಾಲಕ್ಕೆ ಧರಿಸಿದ್ದಾಗಿ ಹೇಳಿದ್ದ. ಆ ಕಾಲಕ್ಕೆ ಪೊಲೀಸರು ಅವುಗಳನ್ನು ವಶಕ್ಕೆ ಪಡೆದು ಮಹಜರ್ ಬರೆದು ನನ್ನ ಸಹಿ ಪಡೆದಿದ್ದರು. ಈಗ ನಾನು ನೋಡುತ್ತಿರುವ ಮಹಜರ್ ಅದೇ ಇದ್ದು ಅದರಲ್ಲಿನ ಸಹಿ ನನ್ನದೇ ಇದೆ. ಸದರಿ ಮಹಜರ್ ನ್ನು ನಿಪಿ *9* ಸಹಿಯನ್ನು ನಿಪಿ *9*(ಎ) ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಮು.ಮಾ *4* ರಿಂದ *6* ಎಂದು ಗುರುತಿಸುವ ವಸ್ತುಗಳು ಆ ದಿನ ಅಮಾನತ್ತು ಪಡಿಸಿಕೊಂಡ ವಸ್ತುಗಳಿವೆ. ಕೋರ್ಟು ಮುಂದಿರುವ ಆರೋಪಿತನೇ ಆ ದಿನ ಆ ವಸ್ತುಗಳನ್ನು ಹಾಜರುಪಡಿಸಿರುತ್ತಾನೆ. ಬೆಳಿಗ್ಗೆ *11* ರಿಂದ *11.35* ರವರೆಗೆ ಆ ಮಹಜರ್ ನ್ನು

ಮಾಡಿದ್ದರು. ಈಗ ನಾನು ನೋಡುತ್ತಿರುವ ಫೋಟೋಗಳು ಮಹಜರ್ ಕಾಲಕ್ಕೆ ತೆಗೆದ ಫೋಟೋಗಳಿರುತ್ತವೆ. ಅದನ್ನು ನಿಪಿ *10* ಮತ್ತು *11* ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು ಃ ಆರೋಪಿ ಪರ ವಕೀಲ**ರ ಗೈರು ಹಾಜರಿದ್ದು ಆರೋಪಿ ಸಮಯ ಕೋರಿದ್ದು ಸೂಕ್ತ ಕಾರಣ ಇಲ್ಲದಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಗಿದೆ.

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
**ಮೈಸೂರು**